# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 26/5/2020

### ಮೇಲ್ಮನೆಗೆ ಬಿಜೆಪಿಯಲ್ಲಿ ಭಾರಿ ಪೈಪೋಟಿ

ವಿ.ವಾ. 26-5-2020

ಬೆಂಗಳೂರು: ಮೇಲ್ಮನೆ ಪ್ರವೇಶಕ್ಕೆ ಬಿಜೆಪಿಯೊಳಗೆ ಭರ್ಜರಿ ಪೈಪೋಟಿ
ಶುರುವಾಗಿದೆ. ಮೂಲ ಬಿಜೆಪಿ ಮತ್ತು ವಲಸೆ ಬಂದವರು ಟಿಕೆಟ್
ಗಾಗಿ ಕಸರತ್ತು ನಡೆಸಿರುವ ಕಾರಣ, ಸಹಜವಾಗಿಯೇ ಈ
ಬಾರಿ ವಿಧಾನ ಪರಿಷತ್ ಚುನಾವಣೆ ಕುತೂಹಲ ಕೆರಳಿಸಿದೆ.
ಮಾಜಿ ಸಚಿವರಾದ ಎಚ್.ವಿಶ್ವನಾಥ್, ಎಂಟಿಬಿ ನಾಗರಾಜ್,
ಆರ್.ಶಂಕರ್ ವಿಧಾನ ಪರಿಷತ್ ಮೇಲೆ ಕಣ್ಣಿಟ್ಟಿದ್ದಾರೆ.
ಜೆಡಿಎಸ್ ಮತ್ತು ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಪತನ
ಸಂದರ್ಭದಲ್ಲಿ ಬಿ.ಎಸ್. ಯಡಿಯೂರಪ್ಪ ಮತ್ತು
ಪಕ್ಷದ ವರಿಷ್ಠರು ನೀಡಿದ್ದ ಭರವಸೆ ನೆನಪಿಸುತ್ತಿರುವ
ಮೂವರು, ತಮ್ಮದೇ ಪ್ರಭಾವ ಬಳಸಿ ಮೇಲ್ಮನೆ
ಬಾಗಿಲು ಬಡಿಯುತ್ತಿದ್ದಾರೆ. ಏನಾದರೂ ಮಾಡಿ ಈ
ಬಾರಿ ವಿಧಾನ ಪರಿಷತ್ ಪ್ರವೇಶಿಸಿದರೆ, ಮುಂದೆ
ಸಚಿವರಾಗುವ ಅರ್ಹತೆ ಪಡೆಯಬಹುದು ಎನ್ನುವುದು
ಒಳಗಿನ ಲೆಕ್ಕಾಚಾರ. ಬಹಳ ವರ್ಷಗಳಿಂದ ಪಕ್ಷಕ್ಕಾಗಿ
ದುಡಿಯುತ್ತಲೇ ಬಂದಿರುವ ನಿಷ್ಠಾವಂತ ಮುಖಂಡರು, ಆರ್
ಎಸ್ಎಸ್ ನೆಲೆಯಿಂದ ಬಂದ ಪ್ರಮುಖರು ಮೇಲ್ಮನೆಗೆ ಟಿಕೆಟ್
ನಿರೀಕ್ಷೆಯಲ್ಲಿದ್ದಾರೆ. ಗೋ. ಮಧುಸೂದನ್, ನಿರ್ಮಲ ಕುಮಾರ್
ಸುರಾನಾ, ಯೋಗೇಶ್ವರ್ ಪಕ್ಷದ ವರಿಷ್ಠರ ಗಮನ ಸೆಳೆದು ತಮಗೆ
ಮನ್ನಣೆ ನೀಡುವಂತೆ ಕೇಳಿಕೊಂಡಿದ್ದಾರೆ.

